ಓ.ಎಸ್. ನಂ. 210/2014

ಪಿ.ಡಬ್ಲ್ಯು: 01

ದಿನಾಂಕಃ 03-08-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ - ಶ್ರೀ ಬಿ.ವಿ.ಪಿ ವಕೀಲರಿಂದ.

01ನೇ ಪ್ರತಿವಾದಿಯು ನನಗೆ ಅಕ್ಕನಾಗಬೇಕು. 01ನೇ ಪ್ರತಿವಾದಿ ಮತ್ತು ನಾನು ಅಕ್ಕ-ತಂಗಿ ಎಂದರೆ ಸರಿ. ನನ್ನ ತಂದೆಯಾದ ಮುತ್ತೆಪ್ಪನವರಿಗೆ ಇಬ್ಬರು ಅಣ್ಣ-ತಮ್ಮಂದಿರು ಇರುತ್ತಾರೆ. ಅವರುಗಳ ಹೆಸರು ಮೂಗಪ್ಪ ಮತ್ತು ಸಿದ್ದಪ್ಪಇರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಅಣ್ಣ-ತಮ್ಮಂದಿರು ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಒಂದೆ ಮನೆಯಲ್ಲಿ ವಾಸವಾಗಿದ್ದರು ಎಂದು ಹೇಳುತ್ತಾರೆ. ನಮ್ಮ ತಂದೆಯ ಅಣ್ಣ-ತಮ್ಮಂದಿರು ಸಾಯುವವವರೆಗೂ ಜೊತೆಯಾಗಿಯೇ ವಾಸವಾಗಿದ್ದರು. ಮೂಗಪ್ಪನವರಿಗೆ 05 ಜನ ಮಕ್ಕಳು ನನ್ನ ತಂದೆಗೆ ಇಬ್ಬರು ಮಕ್ಕಳು, ಸಿದ್ದಪ್ಪನವರಿಗೆ 03 ಜನ ಮಕ್ಕಳು. ನನ್ನ ತಂದೆಯ ತಂದೆಯಾದ ನಾಗಪ್ಪನವರು ನಾನು ಹುಟ್ಟುವಕಿಂತ ಮುಂಚಿತವಾಗಿ ತಿರಿಕೊಂಡಿರುತ್ತಾರೆ. ದಾವಾ ಆಸ್ತಿ 03 ಮನೆಗಳು 12 ಜಮೀನುಗಳು ಇರುತ್ತದೆ. ನಮ್ಮ ತಂದೆಯವರು ಮತ್ತು ಅವರ ಅಣ್ಣ-ತಮ್ಮಂದಿರು ಸಾಗವಳಿ ಮಾಡುತ್ತಿದ್ದರು ಅವರುಗಳು ಎಷ್ಟು ಎಷ್ಟು ಎಕರೆಯಲ್ಲಿ ಸಾಗವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ಮತ್ತು ಅವರ ಅಣ್ಣ-ತಮ್ಮಂದಿರು ಊರಾಗಿನ ಮನೆಯಲ್ಲಿ ವಾಸವಾಗಿದ್ದರು. ಸದರಿ ಮನೆಯ ಚಿಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ಒಂದು ಮನೆ ಕಣದಲ್ಲಿ ಇನ್ನೊಂದು ಮನೆ ವಾಸ ಮಾಡುವ ಮನೆಯಹಿಂದೆ ಇರುತ್ತದೆ. ನಮ್ಮ ತಂದೆ ಮತ್ತು ಅವರ ಅಣ್ಣ-ತಮ್ಮಂದಿರು ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನಮ್ಮ ಮತ್ತು ಅವರ ಅಣ್ಣ-ತಮ್ಮಂದಿರು ಬೇರೆ ಮನೆಯಲ್ಲಿ ವಾಸವಾಗಿ ಜಂಟಿಯಾಗಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾತನಾದ ನಾಗಪ್ಪನವರಿಗೆ ದಾವಾ ಆಸ್ತಿ ಯಾವರೀತಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾಗಪ್ಪನವರಿಗೆ ಯಾವೇರಿತಿಯಾಗಿ ಆಸ್ತಿಗಳು ಬಂದಿರುತ್ತದೆ ಎಂದು ನಾನು ಬೇರೆಯವರನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ನನ್ನ ತಂದೆ ಮತ್ತು ಅವರ ಅಣ್ಣ-ತಮ್ಮಂದಿರು ಮೌಖಿಕವಾಗಿ ಪಾಲು ಮಾಡಿಕೊಂಡರು ಎಂದರೆ ಸರಿಯಲ್ಲ. ಸದರಿ ಪಾಲು

ವಿಭಾದಲ್ಲಿ ನನ್ನ ತಂದೆಗೆ ಐಟಂ ನಂ. 09 ರಿಂದ 12 ದಾವಾ ಆಸ್ತಿಗಳು ಪಾಲಿಗೆ ಬಂದಿದ್ದವು ಎಂದರೆ ಸರಿಯಲ್ಲ. ನಮ್ಮ ತಂದೆಯವರು ಎ.ಪಿ.ಎಂ.ಸಿ ಗಲಾಟೆಯಲ್ಲಿ ಜೈಲಿಗೆ ಹೋಗಿದ್ದರು ಎಂದರೆ ಸರಿ. ಆಗ ಜೈಲಿನಿಂದ ಹೊರ ಬರಲು ಸಾಕಷ್ಟು ಹಣವನ್ನು ನನ್ನ ತಂದೆಯವರು ಸಾಲವನ್ನು ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಮಾನಸಿಕವಾಗಿ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. 01ನೇ ಪ್ರತಿವಾದಿ ತನ್ನ ತವರ ಮನೆಗೆ ಹೊಗಿಬಂದು ಮಾಡುತ್ತಿದರು ಎಂದರೆ ಸಾಕ್ಷಿಯು ನಾನು ಹೊಗಿ ಬಂದು ಮಾಡುತ್ತಿದ್ದೆನು ಎಂದು ಹೇಳುತ್ತಾರೆ. ನನ್ನ ತಾಯಿಯನ್ನು ನನ್ನ ಅಕ್ಕನಾದ 01ನೇ ಪ್ರತಿವಾದಿಯು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ನಾನು ನೋಡಿಕೂಳ್ಳುತ್ತಿದ್ದೆನು ಎಂದು ಹೇಳುತ್ತಾರೆ.

ನಾನು ಈಗ ವಾಸವಾಗಿರುವ ಮನೆಕೊಟೆ ಗ್ರಾಮವಾಗಿರುತ್ತದೆ. ನಾನು ಪಾಪಣ್ಣನವರಿಗೆ 02ನೇ ಹೆಂಡತಿ ಎಂದರೆ ಸರಿ. ನಾನು ಪಾಪಣ್ಣನವರ ಜೊತೆ ಮದುವೆಯಾಗಿ ಹೊಗಿದ್ದರಿಂದ ನನ್ನ ಅಕ್ಕನವರು ನನ್ನ ತಾಯಿಯನ್ನು ನೂಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ನಾನು ನೋಡಿಕೊಳ್ಳುತ್ತಿದ್ದೆನೆ ಎಂದು ಹೇಳುತ್ತಾರೆ. ನನ್ನ ತಾಯಿಯವರು ಮಾನಸಿಕವಾಗಿ ಆನಾರೋಗ್ಯದಿಂದ 01ನೇ ಪ್ರತಿವಾದಿ ಅವರನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ನಾನು ನೋಡಿಕೊಳ್ಳುತ್ತಿದ್ದೆನೆ ಎಂದು ಹೇಳುತ್ತಾರೆ. ನನ್ನ ತಂದೆಯವರು ನನ್ನ ತಾಯಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಹೆಚ್ಚಿನ ಹಣಬೆಕಾಗಿದ್ದರಿಂದ ಸಾಲ ಮಾಡಿಕೊಂಡಿದ್ದರುಲ ಎಂದರೆ ಸರಿಯಲ್ಲ. ನನ್ನ ತಂದೆಯವರು ತಿರಿಕೊಂಡು ಈಗ 05 ವರ್ಷವಾಗಿರುತ್ತದೆ. ನನ್ನ ತಾಯಿ ತಿರಿಕೊಂಡು ಈಗ 07 ವರ್ಷವಾಗಿರುತ್ತದೆ. ನನ್ನ ತಂದೆಯವರ ಕೈ ಮುರಿದಿತ್ತು ಎಂದರೆ ಸರಿಯಲ್ಲ. ನನ್ನ ತಂದೆಯವರು ತಮ್ಮ ಖರ್ಚಿಗಾಗಿ ತಮ್ಮ ಪಾಲಿಗೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾಗೇಂದ್ರಪ್ಪ ಎಂದರೆ 01ನೇ ಪ್ರತಿವಾದಿಯ ಗಂಡ ಮತ್ತು 08ನೇ ಪ್ರತಿವಾದಿ. ಅವರು ಹರಕಭಾವಿಯಲ್ಲಿ ವಾಸವಾಗಿರುತ್ತಾರೆ. ಅವರಿಗೆ ಜಮೀನು ಇರುತ್ತದೆ. ಆದರೆ ಎಷ್ಟು ಎಕರೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಐಟಂ ನಂ. 09 ರಿಂದ 12 ನೇ ಸ್ವತ್ತುಗಳು ನನ್ನ ದೊಡ್ಡಪ್ಪನಾದ ಮೂಗಪ್ಪನವರ ಸ್ವಾಧೀನದಲ್ಲಿರುತ್ತದೆ. . ದಾವಾ ಆಸ್ತಿಯ ಐಟಂ ನಂ. 09 ರಿಂದ 12 ನೇ ಸ್ವತ್ತುಗಳು 08ನೇ ಪ್ರತಿವಾದಿಯ ಹೆಸರಿನಲ್ಲಿದ್ದು ಅವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಿಪಿಃ 25 ರಲ್ಲಿ . ದಾವಾ ಆಸ್ತಿಯ ಐಟಂ ನಂ. 09

ರಿಂದ 12 ನೇ ಸ್ವತ್ತುಗಳು 08ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದು ತೋರಿಸುತ್ತದೆ ಎಂದರೆ ಸರಿಯಲ್ಲ. 08ನೇ ಪ್ರತಿವಾದಿಗೆ . ದಾವಾ ಆಸ್ತಿಯ ಐಟಂ ನಂ. 09 ರಿಂದ 12 ನೇ ಸ್ವತ್ತುಗಳು ಹಕ್ಕುಬದಲಾವಣೆಯಾಗಿರುತ್ತದೆ ಎಂದರೆ ಸಾಕ್ಷಿಯು ಅದಕ್ಕಾಗಿಯೇ ಈದಾವೆಯನ್ನು ಹಾಕಿರುತ್ತೇವೆ ಎಂದು ಹೇಳುತ್ತಾನೆ. ದಾವಾ ಆಸ್ತಿಗಳು ಸುಮಾರು ವರ್ಷ ಹಿಂದೆ ಪಾಲು ವಿಭಾಗವಾಗಿದ್ದು ಅವರು ಪಾಲಿಗೆ ಬಂದ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. 08ನೇ ಪ್ರತಿವಾದಿಯಾದ ನನ್ನ ಮಾವನವರ ದ್ವೇಷದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. 08ನೇ ಪ್ರತಿವಾದಿಯು . ದಾವಾ ಆಸ್ತಿಯ ಐಟಂ ನಂ. 09 ರಿಂದ 12 ನೇ ಸ್ವತ್ತುಗಳು ಸ್ವಾಧೀನದಲ್ಲಿದ್ದು ಅವರೆ ಮಾಲಿಕರಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಲ್ಲ ಹಕ್ಕು ಮತ್ತು ಪಾಲು ಕೊಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾವು ಒಟ್ಟುಕುಟುಂಬದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಐಟಂ ನಂ. 14 ಮನೆಯನ್ನು ನನ್ನ ತಂದೆಯವರು 08ನೇ ಪ್ರವಾದಿಗೆ ಮಾರಾಟ ಮಾಡಿದ್ದು ಅವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಯು 08ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮಾರಾಟಕ್ಕೆ ನನ್ನ ದೊಡ್ಡಪ್ಪನಾದ ಮೂಗಪ್ಪನವರು ಒಪ್ಪಿಗೆ ಇದೆ ಎಂದು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂ. 13 ಮತ್ತು 15 ಮನೆಗಳಲ್ಲಿ 07ನೇ ಪ್ರತಿವಾದಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.